# ರಾಮಕೃಷ್ಣ ಮಹಾಸಂಘದ ಇತ್ತೀಚಿನ ಚಟುವಟಿಕೆಗಳು

ಸುಮಾರು ೪ ತಿಂಗಳ ಅವಧಿಯ ನಂತರ ಬೇಲೂರು ಮಠವು ಭಕ್ತರಿಗಾಗಿ ಹಾಗೂ ಸಂದರ್ಶಕರಿಗಾಗಿ ಆಗಸ್ಟ್ ೧೮ರಿಂದ ತೆರೆಯಲ್ಪಟ್ಟಿತು. ಆದರೆ ಭೇಟಿ ನೀಡುವವರು ಲಸಿಕೆ ಹಾಕಿಸಿಕೊಂಡಿರಬೇಕು ಅಥವಾ ಕೋವಿಡ್ ಟೆಸ್ಟ್‌ನಲ್ಲಿ ನೆಗೆಟಿವ್ ರಿಪೋರ್ಟ್ ಬಂದಿರಬೇಕು ಎಂಬ ನಿಯಮವನ್ನು ಪಾಲಿಸಲಾಗುತ್ತಿದೆ. ಕೋವಿಡ್-೧೯ರ ಎರಡನೇ ಅಲೆಯ ಸಂದರ್ಭದಲ್ಲಿ ಏಪ್ರಿಲ್ ೨೨ ರಿಂದ ಬೇಲೂರು ಮಠವನ್ನು ಮುಚ್ಚಲಾಗಿತ್ತು .

೨೦೧೫ರಲ್ಲಿ ರಾಮಕೃಷ್ಣ ಮಿಷನ್ ಹಾಗೂ **ಯುನೆಸ್ಕೋ** ನಡುವೆ ಬೆಸೆಯಲಾದ ಅಧಿಕೃತ ಸಂಬಂಧವನ್ನು ಇನ್ನೂ ೫ ವರ್ಷಗಳ ವರೆಗೆ, ಅಂದರೆ ೨೦೨೫ರ ತನಕ ವಿಸ್ತರಿಸಲಾಗಿದೆ.

ಹೊಸ ಶಾಖಾಕೇಂದ್ರ: ನ್ಯೂಝಿಲ್ಯಾಂಡ್‌ನ **ಆಕ್ಲಾಂಡ್** ನಲ್ಲಿರುವ ರಾಮಕೃಷ್ಣ ವೇದಾಂತ ಸೆಂಟರ್ ಅನ್ನು ರಾಮಕೃಷ್ಣ ಮಠಕ್ಕೆ ಸೇರ್ಪಡೆ ಮಾಡಲಾಯಿತು. ಈ ಸೆಂಟರ್ ೨೦೦೪ರಲ್ಲಿ ಆರಂಭವಾಯಿತು.

**ಶಾಖಾಕೇಂದ್ರಗಳಲ್ಲಿ ನಡೆದ ಚಟುವಟಿಕೆಗಳು : ನಾರಾಯಣಪುರ** ಕೇಂದ್ರವು ಜುಲೈ ಹಾಗೂ ಆಗಸ್ಟ್ ತಿಂಗಳಲ್ಲಿ ಕೆಲವು ಹೊಸ ಕಟ್ಟಡಗಳನ್ನು ಹಾಗೂ ವಿಭಾಗಗಳನ್ನು ಉದ್ಘಾಟಿಸಿತು.

**ರಾಂಚಿ ಮೊರಾಬಾದಿ** ಕೇಂದ್ರವು ಜುಲೈ ೨೧ರಂದು **'ಪ್ರಬುದ್ಧ ಗ್ರಾಮ'** ಎಂಬ ತ್ರೈಮಾಸಿಕ ಪತ್ರಿಕೆಯನ್ನು ಆರಂಭಿಸಿತು. ಇದು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯ ಕುರಿತಾಗಿರುವ ಪತ್ರಿಕೆಯಾಗಿದೆ. ಈ ಮೂಲಕ ಹಿಂದೆ ಈ ಕೇಂದ್ರವು ಹೊರಡಿಸುತ್ತಿದ್ದ 'ದಿವ್ಯಾಯನ ಸಮಾಚಾರ' ಎಂಬ ಪತ್ರಿಕೆಯನ್ನು ನಿಲ್ಲಿಸಲಾಗಿದೆ.

**ಝಾರ್‌ಗ್ರಾಮ** ಆಶ್ರಮದ ಶಾಲೆಯಲ್ಲಿ ೧೦ ಹಾಗೂ ೧೨ ತರಗತಿಗಳಲ್ಲಿ ಉತ್ತಮ ಅಂಕಗಳನ್ನು ಗಳಿಸಿದ ೧೩ ಮಂದಿ ಬುಡಕಟ್ಟು ಜನಾಂಗದ ವಿದ್ಯಾರ್ಥಿಗಳಿಗೆ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯವರು ಸನ್ಮಾನ ಮಾಡಿದರು.

**ಬಾಗ್‌ಬಜಾರ್** ಕೇಂದ್ರದಲ್ಲಿ 'ಮಾ ಶಾರದಾ ಚಾರಿಟೇಬಲ್ ಆಸ್ಪತ್ರೆ'ಯ ಹೊಸ ಕಟ್ಟಡವನ್ನು ರಾಮಕೃಷ್ಣ ಮಹಾಸಂಘದ ಪರಮಾಧ್ಯಕ್ಷರು ಆಗಸ್ಟ್ ೧೫ರಂದು ವರ್ಚುಅಲ್ ಆಗಿ ನೆರವೇರಿಸಿದರು.

ಉತ್ತರಾಖಂಡ ಮುಖ್ಯಮಂತ್ರಿಗಳಾದ ಶ್ರೀ ಪುಷ್ಕರ್ ಸಿಂಗ್ ಧಾಮಿಯವರು **ಡೆಹ್ರಾಡೂನ್** ಕೇಂದ್ರದ ವಿವೇಕಾನಂದ ನೇತ್ರಾಲಯಕ್ಕೆ ಅದು ಕೋವಿಡ್-೧೯ ಸಂದರ್ಭದಲ್ಲಿ ಸಲ್ಲಿಸಿದ ಸೇವೆಗಾಗಿ, ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ಪ್ರಶಸ್ತಿ ಪತ್ರವನ್ನು ನೀಡಿದರು. ಇದೇ ರೀತಿ **ದೆಹಲಿ, ಶಿವನಹಳ್ಳಿ** ಹಾಗೂ **ತಂಜಾವೂರು** ಕೇಂದ್ರಗಳಿಗೂ ಸ್ಥಳೀಯ ಅಧಿಕಾರಿಗಳು ಸನ್ಮಾನ ಮಾಡಿದರು.

**ಇಟಾನಗರ** ಕೇಂದ್ರದ ಆಸ್ಪತ್ರೆಯ ಹೊಸ ಎಂ.ಆರ್.ಐ. ಸ್ಕ್ಯಾನಿಂಗ್ ಕೇಂದ್ರವನ್ನು ಅರುಣಾಚಲ ಪ್ರದೇಶದ ಮುಖ್ಯಮಂತ್ರಿಗಳಾದ ಶ್ರೀ ಪೇಮಾ ಖಂಡು ಅವರು ಆಗಸ್ಟ್ ೨೨ರಂದು ನೆರವೇರಿಸಿದರು. ಇದೇ ಸಂದರ್ಭದಲ್ಲಿ ಆಸ್ಪತ್ರೆಗಾಗಿ ಕಟ್ಟಿಸಲಿರುವ ೨೦೦ ಹಾಸಿಗೆಗಳ ಆಸ್ಪತ್ರೆಗೆ ಶಿಲಾನ್ಯಾಸ ಕಾರ್ಯಕ್ರಮವನ್ನು ಕೂಡ ನೆರವೇರಿಸಿದರು.

**ಮೌಲ್ಯಶಿಕ್ಷಣ ಕಾರ್ಯಕ್ರಮಗಳು: ದೆಹಲಿ** ಕೇಂದ್ರವು ಜುಲೈ ೨೫ರಿಂದ ಆಗಸ್ಟ್ ೨೬ರ ವರೆಗೆ ೨೫ ಆನ್‌ಲೈನ್ ಶಿಬಿರಗಳನ್ನು ನಡೆಸಿತು. ಇವುಗಳಲ್ಲಿ ೨೪೩೫ ಮಂದಿ ಅಧ್ಯಾಪಕರು ಹಾಗೂ ಪೋಷಕರು ಪಾಲ್ಗೊಂಡರು. **ಹೈದರಾಬಾದ್** ಮಠವು ಜುಲೈ ೫ರಿಂದ ಆಗಸ್ಟ್ ೫ರ ವರೆಗೆ ಮಕ್ಕಳಿಗಾಗಿ ಒಂದು ತಿಂಗಳ ಕಾರ್ಯಕ್ರಮವನ್ನು ನಡೆಸಿತು. ಇದರಲ್ಲಿ ೩೫೦ ಮಕ್ಕಳು ಭಾಗವಹಿಸಿದರು. ಇದರಲ್ಲಿ ವೇದಮಂತ್ರ , ಭಜನೆ, ಯೋಗಾಸನ, ನೈತಿಕ ಮೌಲ್ಯ ತರಗತಿಗಳು ನಡೆದವು. ಆಗಸ್ಟ್ ೪ರಂದು **ನೌರಾ** ಮಠವು ನಡೆಸಿದ ತರಬೇತಿ ಕಾರ್ಯಕ್ರಮದಲ್ಲಿ ೨೦೦ ಮಂದಿ ಶಿಕ್ಷಕರು ಭಾಗವಹಿಸಿದ್ದರು.







Managing Editor : Swami Muktidananda
Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020